**ಸಾಕ್ಷಿಗೆ ದಿನಾಂಕ 21.02.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ ವಕೀಲರಿಂದ**

ನಿಪಿ-3 ದಾಖಲೆಯಲ್ಲಿ ಈರಯ್ಯ ಬಿನ್ ಹಲಗಯ್ಯ ಎಂಬುದನ್ನು ಕಡೆದು ಹಾಕಿ ಕೆಂಪಮ್ಮರವರ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿ ಸದರಿ ಖಾತೆ ಬದಲಾವಣೆ ಸುಳ್ಳು ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಈರಯ್ಯ ಬಿನ್ ಹಲಗಯ್ಯ ಹೆಸರು ನಮೂದು ಇದ್ದು ಎಮ್.ಆರ್ ಕಾಲಂನಲ್ಲಿ ಎಮ್.ಆರ್. ಸಂಖ್ಯೆ ನಮುದಾಗಿಲ್ಲ. ನಿಪಿ-4 ರ ಆಧಾರದ ಮೇರೆಗೆ ನಿಪಿ-1 ರ ದಾಖಲೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ದಾವಾ ಸ್ವತ್ತನ್ನು ಮಾರಾಟ ಮಾಡಬಾರದು ಎಂದು ಆದೇಶ ಇದ್ದರು ನಾನು 6 ನೇ ಪ್ರತಿವಾದಿಗೆ ಸರ್ವೆ ನಂಬರ 68 ರಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಮಾರಾಟ ಮಾಡಿದ ನಂತರ ಪುನಃ ನನ್ನ ಹೆಸರಿಗೆ ಸದರಿ ಸ್ವತ್ತನ್ನು ಬರೆಸಿಕೊಂಡಿಲ್ಲ. ನಾನು ಹಾಗೂ 6 ನೇ ಪ್ರತಿವಾದಿ ಸೇರಿಕೊಂಡು ವಾದಿಗೆ ಸೇರಿದ ದಾವಾ ಸ್ವತ್ತಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಸ್ವತ್ತನ್ನು ಅನ್ಯಕ್ರಾಂತ ಮಾಡಲು ಪ್ರಯತ್ನ ಪಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತು ತಮಗೆ ಸೇರಬೇಕು ಎಂದು ದಾವೆ ಸಲ್ಲಿಸಿರುತ್ತಾರೆ. ನಿಪಿ-1 ರಿಂದ 4 ರ ದಾಖಲೆಗಳು ವಾದಿಯ ತಾಯಿಯ ಹೆಸರಿನಲ್ಲಿರುವ ದಾಖಲೆಗಳು ಎಂದರೆ ಸರಿಯಲ್ಲ. ನನ್ನ ತಂದೆ ಸರ್ವೆ ನಂಬರ 68 ರಲ್ಲಿ ಜಮೀನು ಖರೀದಿಸುವಾಗ ನಾನು 9 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನು. ನನ್ನ ತಂದೆ ಕೆ.ಎಸ್.ಆರ್.ಟಿ.ಸಿಯಲ್ಲಿ ಜುನಿಯರ್ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಪದವಿ ವಿದ್ಯಾಭ್ಯಾಸ ಮಾಡಿದ್ದರು. ನನ್ನ ತಂದೆ ಖರೀದಿಸುವಾಗ ಯಾವ ಯಾವ ದಾಖಲೆಗಳನ್ನು ಪರೀಶಿಲನೆ ಮಾಡಿ ಖರೀದಿಸಿರುತ್ತಾರೆ ಎಂದು ಚರ್ಚೆ ಮಾಡಿಲ್ಲ. ಯಾವ ಯಾವ ದಾಖಲೆಗಳನ್ನು ಪರಿಶೀಲಿಸಿ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ತಂದೆ ಹಾಗೂ 1 ನೇ ಪ್ರತಿವಾದಿ ಸೇರಿಕೊಂಡು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಈರಯ್ಯರವರಿಂದ ಸ್ವತ್ತನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈರಯ್ಯರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಹಿತಾಸಕ್ತಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈರಯ್ಯರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನಾನು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸಾಕ್ಷಿ ಈರಯ್ಯರವರಿಗೆ ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮೂಲತಃ ಈರಯ್ಯರವರ ಹೆಸರಿನಲ್ಲಿರಲಿಲ್ಲ ಆದರೂ ಸಹ ನಿಡಿ-1 ರ ದಾಖಲೆ ಈರಯ್ಯರವರ ಹೆಸರಿನಲ್ಲಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನಾನು ನನ್ನ ತಾಯಿ ವಾದಿಯ ದಾವಾ ಸ್ವತ್ತಿಗೆ ತೊಂದರೆ ನೀಡಿ ಅಕ್ರಮವಾಗಿ ವಾದಿಯಿಂದ ದಾವಾ ಸ್ವತ್ತನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2013 ರ ಮುಂಚಿತವಾಗಿ ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿರಲಿಲ್ಲ 2013 ರಲ್ಲಿ ಅಕ್ರಮವಾಗಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ ಸಾಕ್ಷಿ 1992 ದಿಂದಲೂ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಮೈಸೂರಿನ ಸುತ್ತಮುತ್ತ ನಿವೇಶನಗಳು ಆಗಿದ್ದರಿಂದ ಅಕ್ರಮವಾಗಿ ವಾದಿಯಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಸರ್ವೆ ನಂಬರ 68 ರ ನಂತರ ಸರ್ವೆ ನಂಬರ 69 ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಹಾಗೂ ಸರ್ವೆ ನಂಬರ 68 ರ ಅಕ್ಕಪಕ್ಕ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಈರಯ್ಯರವರಿಂದ 1 ನೇ ಪ್ರತಿವಾದಿ ಖರೀದಿಸಿದ ಜಮೀನಿನ ಚೆಕ್ಕುಬಂದಿ ಸರ್ವೆ ನಂಬರ 68 ರ ಚೆಕ್ಕುಬಂದಿ ಎಂದರೆ ಸರಿ. ನಿಡಿ-1 ರಲ್ಲಿರುವ ಚೆಕ್ಕುಬಂದಿ ಸರ್ವೆ ನಂಬರ 68 ರ ಚೆಕ್ಕುಬಂದಿ ಎಂದರೆ ನನಗೆ ಗೊತ್ತಿಲ್ಲ. ಈರಯ್ಯರವರಿಗೆ ಸರ್ವೆ ನಂಬರ 68 ಜಮೀನನ್ನು ಮಾರಾಟ ಮಾಡುವ ಹಕ್ಕು ಇತ್ತು ಸರ್ವೆ ನಂಬರ 71 ನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು 1 ಹಾಗೂ 6 ನೇ ಪ್ರತಿವಾದಿ ಮತ್ತು ನಾನು ಸೇರಿಕೊಂಡು ಸೃಷ್ಟಿಸಿ ಹಾಜರುಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ. ವಾದಿಗೆ

ಸೇರಿದ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ರ ಕ್ರಯ ಪತ್ರದ ಸಾಕ್ಷಿಗಳ ವಿಳಾಸ ನನಗೆ ಗೊತ್ತಿಲ್ಲ. ನಿಡಿ-1 ರಲ್ಲಿ ಸಾಕ್ಷಿದಾರರ ಹೆಸರು ಮತ್ತು ವಿಳಾಸ ನಮೂದು ಮಾಡಿಲ್ಲ. ನಿಡಿ-2 ರಲ್ಲಿ ಸಾಕ್ಷಿದಾರರ ಹೆಸರು ಮತ್ತು ವಿಳಾಸ ನಮೂದು ಮಾಡಿಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**